ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಗುಬ್ಬಿ

ಸಿ.ಸಿ.ನಂ.1677/2024

| | | | |
|---|---|---|---|
| ಹೆಸರು | : | ಮಹೇಂದ್ರ ಪಿ | ಸಿ .ಡಬ್ಲ್ಯೂ :5 |
| ತಂದೆಯ ಹೆಸರು | : | ಲೇಟ್ ಎ ವೈ ಪ್ರಕಾಶ್ | ಪಿ .ಡಬ್ಲ್ಯೂ :9 |
| ವಯಸ್ಸು | : | 34 ವರ್ಷ | |
| ಉದ್ಯೋಗ | : | ದ್ವಿತೀಯ ದರ್ಜೆ ಸಹಾಯಕರು ವಿಶೇಷ ಭೂಸ್ವಾದೀನಾಧಿಕಾರಿಗಳ ಕಾರ್ಯಾಲಯ, ಎತ್ತಿನಹೊಳೆ ಯೋಜನೆ ತುಮಕೂರು | |
| ವಾಸಸ್ಥಳ | : | ಭೀಮಸಂದ್ರ | |

ಸಾಕ್ಷಿಯನ್ನು ದಿಃ 16-06-2025 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ

ಚಾಸಾ -4 ಮತ್ತು 6 ನನಗೆ ಗೊತ್ತು .

ನಿಪಿ -3 ರಲ್ಲಿ ಸಾಕ್ಷಿಯು ತಮ್ಮ ಸಹಿಯನ್ನು ಗುರುತಿಸಿದ್ದಾರೆ ಅದನ್ನು ನಿಪಿ -3 (ಸಿ ) ಎಂದು ಗುರುತಿಸಲಾಯಿತು.

ದಿಃ 01-06-2024 ರಂದು ಗುಬ್ಬಿ ತಾಲ್ಲೂಕು ಕಚೇರಿಯ ಹೆಚ್ಚುವರಿ ಶಿರಸ್ತೇದಾರರ ಕೊಠಡಿಯ ಬಳಿ ಇರುವ ಚಾಸಾ -3 ಮತ್ತು 4 ರವರ ಕ್ಯಾಬಿನ್ ನಲ್ಲಿ ಎದುರು ಭಾಗದಲ್ಲಿ ದಿಃ 01-04-2024 ರಂದು ಕಳವು ಆಗಿದ್ದ 2 ಪ್ರಿಂಟರ್ ಗಳ ಸಂಬಂಧ ನಿಪಿ -3 ಕ್ಕೆ ಸಹಿ ಮಾಡಿದ್ದೇನೆ . ಅಲ್ಲಿ ಸಂಜೆ 4.30 ರಿಂದ 5.30 ರವರೆಗೆ ಮಹಜರು ಮಾಡಿದ್ದಾರೆ . ನಿಪಿ -3 ಕ್ಕೆ ನನ್ನೊಡನೆ ಚಾಸಾ -4 ಮತ್ತು 6 ರವರು ಸಹಿ ಮಾಡಿದ್ದಾರೆ .

ಪಾಟೀಸವಾಲು: ಆರೋಪಿ ಪರ ವಕೀಲರಿಂದಃ-

ನಿಪಿ -3 ರಲ್ಲಿ ಏನು ಬರೆದಿದೆ ಎಂದು ತಿಳಿದುಕೊಂಡಿದ್ದೇನೆ . ಹೆಚ್ ಪಿ ಕಂಪನಿಯ ಪ್ರಿಂಟರ್ ಗಳು ಕಳವು ಆಗಿದ್ದವು ಎಂಬ ಬಗ್ಗೆ ಅದರಲ್ಲಿ ಬರೆಯಲಾಗಿತ್ತು . ಸದರಿ ಪ್ರಿಂಟರ್ ಗಳ ಮಾಡಲ್ ಮತ್ತು ಸೀರಿಯಲ್ ನಂಬರ್ ಗೊತ್ತಿಲ್ಲ . ಪೊಲೀಸರು ಮಹಜರು ಬರಬೇಕೆಂದು ನೋಟೀಸ್ ನೀಡಿದ್ದರೇ ಎಂದರೆ ಮರೆತಿದ್ದೇನೆ ಹೇಳಲು ನೆನಪಾಗುತ್ತಿಲ್ಲ ಎಂದು ತಿಳಿಸಿದ್ದಾರೆ . ಸಂಜೆ 4.30 ರಿಂದ 5.30 ರ ವೇಳೆ ಸ್ಥಳದಲ್ಲಿ ಸಾಕಷ್ಟು ಜನರು ಇದ್ದರು ಎಂದರೆ ಸರಿ . ಸಾರ್ವಜನಿಕರು ನಿಪಿ - 3 ಕ್ಕೆ ಸಹಿ ಮಾಡಿದ್ದರೋ ಇಲ್ಲವೋ ನೆನಪಿಲ್ಲ . ನಾನು ಹೇಳುವಂತೆ ಆ ದಿನ ತಾಲ್ಲೂಕು ಕಚೇರಿಗೆ ನಾನು ಹೋಗಿರಲಿಲ್ಲ , ನನ್ನ ಸಮಕ್ಷಮ ಪೊಲೀಸರು ಯಾವುದೇ ಮಹಜರು ಕ್ರಮ ಕೈಗೊಂಡಿಲ್ಲ, ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ

ಅಧಿಕಾರಿಗಳು ಸೇರಿ ಪೊಲೀಸರೊಡನೆ ಶಾಮೀಲಾಗಿ ಠಾಣೆಯಲ್ಲಿ ಕುಳಿತು ನಿಪಿ -3 ನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ನಿಪಿ -3 ಕ್ಕೆ ಠಾಣೆಯಲ್ಲಿಯೇ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿದೆ , ಸರಿ ಇದೆ ಎಂದು ಒಪ್ಪಿದ್ದಾರೆ.

SD/-
(ಅನುಪಮ.ಡಿ )
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಗುಬ್ಬಿ.